# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

☎:08352-229051 www.kswu.ac.in Fax: 08352 -229057

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–96/2016–17/2877 ದಿನಾಂಕ:18–02–2017

ಗೆ,
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ: 08–02–2017 ರಂದು ಮಧ್ಯಾಹ್ನ 11:30ಗಂಟೆಗೆ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣ ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 08–02–2017ರಂದು ಮಧ್ಯಾಹ್ನ 11:30ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ **"2016–17ನೇ ಹಣಕಾಸು ಸಾಲಿನ ಏಳನೆಯ ಹಾಗೂ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

**– ಸಹಿ –**
**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 23 ಪುಟಗಳು**

**<u>ಪ್ರತಿಗಳು:–</u>**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4-11-2016 | 3-11-2017 |
| 5. | 1(ಇ) | ಡಾ.ಸರಸ್ವತಿ.ಎಸ್ | ಸದಸ್ಯರು | 01-12-2014 | 09-02-2017 |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01-12-2014 | 10-04-2017 |
| 7. | 1(ಎಫ್) | ಶ್ರೀ.ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01-06-2016 | 31-05-2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14-7-2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18-06-2016 | |

## ದಿನಾಂಕ:08–02–2017 ರಂದು ಬೆಳಿಗ್ಗೆ 11:30ಗಂಟೆಗೆ, ಸಿಂಡಿಕೇಟ್ ಸಭಾಂಗಣ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇಲ್ಲಿ ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ–ವಿಜ್ಞಾನ ನಿಕಾಯ | : ಸದಸ್ಯರು |
| 3. | ಡಾ.ಸರಸ್ವತಿ ಎಸ್ | : ಸದಸ್ಯರು |
| 4. | ಡಾ.ಶ್ರೀನಿವಾಸ ಬಳ್ಳಿ | : ಸದಸ್ಯರು |
| 5. | ಶ್ರೀ.ನಾನಾಗೌಡ ಹಿಪ್ಪರಗಿ | : ಸದಸ್ಯರು |
| 6. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 7. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 8. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 9. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 10. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 11. | ಡಾ.ಫರ್‌ಜಾನಾ ಎಂ | : ಸದಸ್ಯರು |
| 12. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 13. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 14. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 15. | ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | : ಸದಸ್ಯರು |
| 16. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 17. | ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಮಲ್ಲೇಶ್ವರಪ್ಪಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

ದಿನಾಂಕ: 19–12–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:**

**ದೃಢೀಕರಿಸಲಾಯಿತು.**

1. **ದಿನಾಂಕ:09–09–2016ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿ *ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಚಾರಗಳು* ವಿಷಯ :1 ವಿಶ್ವವಿದ್ಯಾನಿಲಯದ ಶಿಕ್ಷಕರ ಜೇಷ್ಠತಾ ಪಟ್ಟಿಯ ಕುರಿತಂತೆ ಡಾ.ವೆಂಕೋಬ ನಾರಾಯಣಪ್ಪ ಅವರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು/ಬುಡಕಟ್ಟುಗಳ ಆಯೋಗಕ್ಕೆ ಆಕ್ಷೇಪ ಸಲ್ಲಿಸಿದ್ದು, ಈ ಕುರಿತು ಆಯೋಗದಿಂದ ಪತ್ರವನ್ನು ಬಂದಿದ್ದು, ಆಯೋಗದ ಪತ್ರದಲ್ಲಿರುವ ನಾಲ್ಕು ಅಂಶಗಳ ಕುರಿತು ಕಾನೂನು ಸಲಹೆ ಪಡೆದು ಮುಂದೆ ಬರುವ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ತರಲಾಗುವುದು ಎಂದು ತಿಳಿಸಲಾಯಿತು. ಹಾಗೂ**
2. **ಪುರವಾಣಿ ಸಂಖ್ಯೆ:03ರ ಅತಿಥಿ ಉಪನ್ಯಾಸಕರಾದ ಡಾ.ರಮಾ ಗುಂಡುರಾವ ಅಭ್ಯರ್ಥಿಯನ್ನು ಇತಿಹಾಸ ಅಧ್ಯಯನ ವಿಭಾಗದಲ್ಲಿWorkLoad ಆಧರಸಿ ಮುಂದಿನ ದಿನಗಳಲ್ಲಿ ಪರಿಗಣಿಸಲಾಗುವುದು ಎಂದು ತಿಳಿಸಿದರು.**

ದಿನಾಂಕ: 10–01–2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:–**

1. **ದಿನಾಂಕ:10–01–2017ರ ನಡವಳಿಗಳು ದೃಢೀಕರಿಸಲಾಯಿತು.**
2. **ಗೊತ್ತುವಳಿ ಸಂಖ್ಯೆ:01ರಲ್ಲಿ ಶ್ರೀಮತಿ ಬಿ.ಕೆ.ರತ್ನ ಅವರ ಹೆಸರು ಬಿಟ್ಟು ಹೋಗಿದೆ ಎಂಬುದನ್ನು ಗಮನಕ್ಕೆ ತಂದಾಗ ಆ ಹೆಸರನ್ನು ಸೇರಿಸಿ ಸಮಿತಿಗೆ ನೀಡುವುದಾಗಿ ತಿಳಿಸಿಲಾಯಿತು.**
3. **ಗೊತ್ತುವಳಿ ಸಂಖ್ಯೆ:06ರಲ್ಲಿ ಶ್ರೀ ಸದ್ಗುರು ರಾಯಲಿಂಗೇಶ್ವರ ಜ್ಞಾನ ವಿದ್ಯಾಸಂಸ್ಥೆ ಕಕಮರಿ, *ಕಾಲೇಜ 2017–18ನೇ ಸಾಲಿಗೆ ಸಹಶಿಕ್ಷಣ ಪದವಿ ಕಾಲೇಜಾಗಿ ಪರಿವರ್ತಿಸುವುದರಿಂದ, ಅನ್ಯ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಪಡೆಯಲು ಹಾಗೂ ಎನ್.ಒ.ಸಿ. ನೀಡುವ ಸಲುವಾಗಿ ಸರಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.***

ದಿನಾಂಕ: 11–11–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:– ಒಪ್ಪಿಕೊಳ್ಳಲಾಯಿತು.**

**ದಿನಾಂಕ:11–11–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ: 01*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರಿಗೆ ಹೊರರಾಜ್ಯದಲ್ಲಿ ಸರ್ಕಾರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಆಯಾ ರಾಜ್ಯ ಸರ್ಕಾರಗಳು ವಿದ್ಯಾರ್ಥಿನಿಯರಿಗೆ ಅವರು ವ್ಯಾಸಂಗ ಮಾಡಿರುವ ವಿಶ್ವವಿದ್ಯಾಲಯದಿಂದ ಫಲಿತಾಂಶ ಪ್ರಕಟಿಸಿದ ದಿನಾಂಕ, ವ್ಯಾಸಂಗ ಮಾಡಿದ ಮಾಧ್ಯಮ, ಮೋಡ್ ಆಫ್ ಸ್ಟಡಿ ಸರ್ಟಿಫಿಕೇಟ್ ಸಲುವಾಗಿ ಅರ್ಜಿಗಳು ಬರುತ್ತಿದ್ದು ಈವರೆಗೆ ಈ ಸರ್ಟಿಫಿಕೇಟ್‌ಗಳಿಗೆ ಶುಲ್ಕ ನಿಗದಿಪಡಿಸಿರುವುದಿಲ್ಲ. ಇನ್ನು ಮುಂದೆ ಈ ಎಲ್ಲ ದಾಖಲೆಗಳನ್ನು ವಿದ್ಯಾರ್ಥಿನಿಯರಿಗೆ, ಸಂಬಂಧಿಸಿದ ಇಲಾಖೆಗಳಿಗೆ ದೃಢೀಕೃತ ಪತ್ರ

ನೀಡಲು ಪ್ರತಿ ವಿದ್ಯಾರ್ಥಿನಿಗೆ ಪ್ರತಿ ಕೋರ್ಸಿಗೆ ರೂಪಾಯಿ 550/- ಗಳನ್ನು ನಿಗದಿಪಡಿಸುವುದು ಮತ್ತು ನಕಲು (ಡ್ಯೂಪ್ಲಿಕೇಟ್) ಘಟಿಕೋತ್ಸವ ಪ್ರಮಾಣಪತ್ರಕ್ಕೆ 1000/-ರೂಪಾಯಿಗಳು, ನಕಲು(ಡ್ಯೂಪ್ಲಿಕೇಟ್) ರ್‍ಯಾಂಕ್ ಸರ್ಟಿಫಿಕೇಟ್‌ಗೆ ರೂಪಾಯಿ 250/- ನಿಗದಿಪಡಿಸುವ ವಿಷಯವನ್ನು ದಿನಾಂಕ:11-11-2016ರಂದು ಜರುಗಿದ ಸಭೆಯಲ್ಲಿ **ಮುಂದೂಡಲಾಯಿತು.** ಪ್ರಸ್ತುತ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:-**

**ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :02*

ಸ್ನಾತಕೋತ್ತರ ಪದವಿಗಳ ಪ್ರಥಮ ಹಾಗೂ ತೃತೀಯ ಸೆಮಿಸ್ಟರಿನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ಬದಲು ಇತರ ವಿಶ್ವವಿದ್ಯಾಲಯಗಳಲ್ಲಿ ರೂಢಿಯಲ್ಲಿರುವಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಸಹ 2017-18ನೇ ಶೈಕ್ಷಣಿಕ ಸಾಲಿನ ಹಾಗೂ ಮುಂಬರುವ ಶೈಕ್ಷಣಿಕ ವರ್ಷಗಳಿಂದ ಉತ್ತರ ಪತ್ರಿಕೆಗಳನ್ನು ಒಬ್ಬ ಪರೀಕ್ಷಕರಿಂದ ಮಾತ್ರ ಮೌಲ್ಯಮಾಪನ ಮಾಡಿಸುವದು ಹಾಗೂ ಒಂದು ವೇಳೆ ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ ಹೊರಗಿನ ವಿಶ್ವವಿದ್ಯಾಲಯದಿಂದ ಒಬ್ಬ ಮೌಲ್ಯಮಾಪಕರನ್ನು ಕರೆಯಿಸಿ ಏಕಮುಖವಾಗಿ ಮೌಲ್ಯಮಾಪನ ಮಾಡಿಸುವದು ಹಾಗೂ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ರೂಢಿಯನ್ನು ಜಾರಿಗೆ ತರುವ ವಿಷಯವನ್ನು ದಿನಾಂಕ:11-11-2016 ರಂದು ಜರುಗಿದ ಸಭೆಯಲ್ಲಿ **ಮುಂದೂಡಲಾಯಿತು.** ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:-**

**ಈ ವಿಷಯವನ್ನು ಸಭೆಯಲ್ಲಿ ಕೈಬಿಡಲಾಯಿತು.**

# ಹೊಸ ವಿಷಯಗಳು

### ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ: 03*

**ವಿಷಯ:** ವಿಶ್ವವಿದ್ಯಾಲಯಕ್ಕೆ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ" ಎಂಬ ಪದಾವಳಿಯನ್ನು ಪ್ರತಿಯೋಜಿಸುವ ಕುರಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರಲ್ಲಿ (2001 ರ ಕರ್ನಾಟಕ ಅಧಿನಿಯಮ 29) ಮಹಿಳಾ ವಿಶ್ವವಿದ್ಯಾನಿಲಯ ಎಂಬ ಪದಾವಳಿಯು ಬರುವೆಡೆಗಳಲ್ಲೆಲ್ಲಾ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ" ಎಂಬ ಪದಾವಳಿಗಳನ್ನು ಪ್ರತ್ಯಯಗಳೊಡನೆ ಪ್ರತಿಯೋಜಿಸತಕ್ಕದ್ದು ಎಂದು ಜನವರಿ ಏಳನೇ ದಿನಾಂಕದಂದು ಕರ್ನಾಟಕದ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ. ಈ ವಿಷಯಕ್ಕೆ 2017ರ ಜನೇವರಿ ನಾಲ್ಕನೇ ದಿನಾಂಕದಂದು ಘನತೆವೆತ್ತ ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ. ಆದ್ದರಿಂದ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರವು "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ" ಎಂದು 07-01-2017ರಿಂದ ಅನ್ವಯಿಸುವಂತೆ ಮರುನಾಮಕರಣ ಮಾಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

1. **ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಎಂದು ನಾಮಕಾರಣವನ್ನು ಮಾಡಲು ಒಪ್ಪಿಕೊಳ್ಳಲಾಯಿತು. ಇಂಗ್ಲೀಷಿನಲ್ಲಿ Akkamahadevi Women's University, Vijayapura.**
2. **ಲಾಂಛನದಲ್ಲಿ ವಿಶ್ವವಿದ್ಯಾಲಯದ ಹೆಸರಿನ ಅಕ್ಷರಗಳನ್ನು ಬದಲಾವಣೆ ಮಾಡಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ: 04*

**ವಿಷಯ:-** ದಿವಂಗತ ಪ್ರೊ. ಎಸ್. ಎಸ್. ಪೀರಜಾದೆಯವರ ಪತ್ನಿಯಾದ ಶ್ರೀಮತಿ ಸಾದಿಯಾಬೇಗಂ ಸೈಯದ ಅಫಜಲ ಪೀರಜಾದೆ ಇವರಿಗೆ ದಿನಾಂಕ: 30-11-2015 ರಿಂದ ಅನ್ವಯವಾಗುವಂತೆ ಇವರಿಗೆ ಕುಟುಂಬ ಪಿಂಚಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ನಿಗದಿಪಡಿಸಿ ಪಾವತಿಸುವ ಕುರಿತು.

**ಉಲ್ಲೇಖ:-**1. KCSR ನಿಯಮಗಳು 1958 Appendix - VI Rule 5(2).

2. As per Govt Order No: RD.(spl)/81/PEN/2012,dated: 3-5-2012.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 2 & 3 ರ ಆದೇಶದ ಮೇರೆಗೆ, ದಿವಂಗತ ಪ್ರೊ. ಎಸ್. ಎಸ್. ಪೀರಜಾದೆಯವರ ಪತ್ನಿಯಾದ ಶ್ರೀಮತಿ ಸಾದಿಯಾಬೇಗಂ ಸೈಯದ ಅಫಜಲ ಪೀರಜಾದೆ ಇವರಿಗೆ ದಿನಾಂಕ: 30-11-2015 ರಿಂದ ಅನ್ವಯವಾಗುವಂತೆ ಕುಟುಂಬ ಪಿಂಚಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಈ ಕೆಳಗಿನಂತೆ ನಿಗದಿಪಡಿಸಿ ಪಾವತಿಸಬೇಕಾಗಿದೆ.

| | |
|---|---|
| ಮೃತ ನೌಕರನ ಹೆಸರು | : ದಿವಂಗತ ಪ್ರೊ. ಎಸ್. ಎಸ್. ಪೀರಜಾದೆ |
| ಮೃತ ನೌಕರನ ಪತ್ನಿಯ ಹೆಸರು | : ಶ್ರೀಮತಿ ಸಾದಿಯಾಬೇಗಂ ಸೈಯದ ಅಫಜಲ ಪೀರಜಾದೆ |
| ಆಧಾರ ಕಾರ್ಡ ನಂಬರ | : 3197 1631 1271 |
| ಪ್ಯಾನ ಕಾರ್ಡ ನಂಬರ | : DHWPP2141H |
| ಅಂತಿಮ ಮೂಲ ವೇತನ | : **56498/-** |
| ಸಲ್ಲಿಸಿದ ಅರ್ಹತಾದಾಯಕ ಸೇವೆ | : 39 ವರ್ಷ 10 ತಿಂಗಳು 26 ದಿವಸಗಳು |
| ಪರಿಗಣಿಸಲಾದ ಸೇವಾ ಅವಧಿ | : 33 ವರ್ಷಗಳು |

| **ಕ್ರಸಂ** | **ವಿವರ** | **ಮಂಜೂರು ಮಾಡಿದ ಮೊತ್ತ** |
|---|---|---|
| 1 | ಕೆ.ಸಿ.ಎಸ್.ಆರ್ ನಿಯಮ ಪರಿಶಿಷ್ಟ 6(9) (ಎ) ರನ್ವಯ ಕುಟುಂಬ ಪಿಂಚಣಿ ಪಡೆಯಲು ಅರ್ಹರಾದ ಪತ್ನಿ<br>Name of the eligible person to whom the family pension to be paid at the time death of the pensioner as per the KCSR rule 6(9) (a) | ಶ್ರೀಮತಿ ಸಾದಿಯಾಬೇಗಂ ಸೈಯದ ಅಫಜಲ ಪೀರಜಾದೆ |
| | <u>family penison is fixed for Rs. 23,940/-</u><br>**1) w.e.f. 30-11-2015 to 30-4-2019**<br>**2) w.e.f. 1-5-2019 to till her death** | **23,940/- pm**<br>**16,949/- pm** |
| 2 | ಕುಟುಂಬ ಪಿಂಚಣಿ ಪ್ರಾರಂಭವಾಗುವ ದಿನಾಂಕ<br>Date of Commencement | **30-11-2015** |
| 3 | ನಿವೃತ್ತಿ ಉಪದಾನ<br>DCRG (Retirement Gratuity) | **9,32,217/-** |
| 4 | ಪಿಂಚಣಿ ಪರಿವರ್ತನಾ ಮೊತ್ತ<br>Commutation Amount of Pension | ಅನ್ವಯಿಸುವುದಿಲ್ಲ |

ಆದ್ದರಿಂದ ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಹಾಗೂ ಅನುಮತಿಗಾಗಿ ಮಂಡಿಸಿದೆ.

**ನಿರ್ಣಯ:- ದಿವಂಗತ ಪ್ರೊ. ಎಸ್. ಎಸ್. ಪೀರಜಾದೆಯವರ ಪತ್ನಿಯಾದ ಶ್ರೀಮತಿ ಸಾದಿಯಾಬೇಗಂ ಸೈಯದ ಅಫಜಲ ಪೀರಜಾದೆ ಇವರಿಗೆ ದಿನಾಂಕ: 30-11-2015 ರಿಂದ**

**ಅನ್ವಯವಾಗುವಂತೆ ಕುಟುಂಬ ಪಿಂಚಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ನಿಗದಿಪಡಿಸಿ ಪಾವತಿಸಲು ಅನುಮೋದಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 05*

ವಿಷಯ:- ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆ ಹೆಚ್ಚಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಮಹಿಳಾ ವಿಶ್ವವಿದ್ಯಾಲಯದಲ್ಲಿ **ಪೂರ್ಣಕಾಲಿಕ** ಅತಿಥಿ ಉಪನ್ಯಾಸಕರಿಗೆ NET or SLET or Ph.D ಆದವರಿಗೆ ಪ್ರತಿ ತಿಂಗಳು 17000/-, ಹಾಗೂ ಕೇವಲ ಸ್ನಾತಕೋತ್ತರ ಪದವಿ (55%) ಮುಗಿಸಿದವರಿಗೆ ರೂ. 16000/- ಸಂಭಾವನೆ ನೀಡಲಾಗುತ್ತಿದೆ.

**ಅರೆಕಾಲಿಕ** ಅತಿಥಿ ಉಪನ್ಯಾಸಕರಿಗೆ NET or SLET or Ph.D ಆದವರಿಗೆ ಪ್ರತಿ ತಿಂಗಳು 8500/-, ಹಾಗೂ ಕೇವಲ ಸ್ನಾತಕೋತ್ತರ ಪದವಿ (55%) ಮುಗಿಸಿದವರಿಗೆ ರೂ. 8000/- ಸಂಭಾವನೆ ನೀಡಲಾಗುತ್ತಿದೆ.

ಆದರೆ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿಗೆ NET or SLET with Ph.D/ ಆದವರಿಗೆ ಪ್ರತಿ ತಿಂಗಳು 22,000/-, NET or SLET or Ph.D ಆದವರಿಗೆ 20,000/-, ಹಾಗೂ ಕೇವಲ ಸ್ನಾತಕೋತ್ತರ ಪದವಿ(55%) ಮುಗಿಸಿದವರಿಗೆ ರೂ. 18000/- ಸಂಭಾವನೆ ನೀಡಲಾಗುತ್ತಿದೆ. ಅದರಂತೆ ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಇದನ್ನು ಅಳವಡಿಸಬೇಕಾಗಿದೆ.

ದಿನಾಂಕ: 31-1-2017 ರಂದು ಜರುಗಿದ ಮುಖ್ಯಸ್ಥರ ಸಭೆಯಲ್ಲಿ ಮಹಿಳಾ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು ಮಾನ್ಯ ಕುಲಪತಿಗಳೊಂದಿಗೆ ಚರ್ಚಿಸಿದ ಮೇರೆಗೆ ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

*ನಿರ್ಣಯ:-*

**ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿಗೆ**

1. ***NET or SLET with Ph.D* ಆದವರಿಗೆ ಪ್ರತಿ ತಿಂಗಳು *22,000/-,***
2. ***NET or SLET or Ph.D* ಆದವರಿಗೆ 20,000/-, ಹಾಗೂ**
3. **ಕೇವಲ ಸ್ನಾತಕೋತ್ತರ ಪದವಿ(55%) ಮುಗಿಸಿದವರಿಗೆ ರೂ. 18000/- ಸಂಭಾವನೆ ದಿನಾಂಕ:01-03-2017ರಿಂದ ಅನ್ವಯಸುವಂತೆ ನೀಡಲು ತೀರ್ಮಾನಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 06*

**ವಿಷಯ: ದಿ. ಶ್ರೀ ನರಸಪ್ಪ ನಾಗಲಿಂಗಪ್ಪ ಬಡಿಗೇರ್ ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.**

ಡಾ. ಇಂದಿರಾ ಪ್ರಿಯದರ್ಶಿನಿ ಎನ್.ಬಡಿಗೇರ್ (ದಾನಿಗಳು) ಮನೆ ನಂ. 16, ಎಲಿಗೆನ್ಸ ಬಡಾವಣೆ ಡಯಟ್ ಹತ್ತಿರ ಅಲ್ ಅಮೀನ್ ಮೇಡಿಕಲ್ ಕಾಲೇಜು ಎದುರುಗಡೆ ಅಥಣಿ ರಸ್ತೆ ವಿಜಯಪುರ. ಅವರು ಸ್ನಾತಕೋತ್ತರ ಎಮ್.ಎ. ಸಮಾಜಶಾಸ್ತ್ರದಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ವಿಭಾಗಕ್ಕೆ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ **ದಿ. ಶ್ರೀ ನರಸಪ್ಪ ನಾಗಲಿಂಗಪ್ಪ ಬಡಿಗೇರ್** ಅವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/- ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/- ಸೇರಿಸಿ ಒಟ್ಟು ರೂ. 55000/- ಗಳ ಡಿ.ಡಿ ಯನ್ನು ದಿನಾಂಕ: 16-01-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-*

***2016-17ನೇ ಸಾಲಿನಲ್ಲಿ*** **ಸ್ನಾತಕೋತ್ತರ ಎಮ್.ಎ. ಸಮಾಜಶಾಸ್ತ್ರದಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ವಿಭಾಗಕ್ಕೆ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ** ***ದಿ.ಶ್ರೀ ನರಸಪ್ಪ ನಾಗಲಿಂಗಪ್ಪ ಬಡಿಗೇರ್*** **ಅವರ ಹೆಸರಿನಿಂದ ಚಿನ್ನದ ಪದಕ** ***ಅನುಮೋದಿಸಲಾಯಿತು.***

**<u>ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 07*

**ವಿಷಯ:** ದಿ.ಶ್ರೀ ಸಾಯಪ್ಪ ಯಂಕಪ್ಪ ಮದರಿ ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.

ಪ್ರೊ. ಡಿ.ಎಮ್.ಮದರಿ(ದಾನಿಗಳು) ಮುಖ್ಯಸ್ಥರು ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ರವರು ಸ್ನಾತಕ ಬಿ.ಎ. ಅರ್ಥಶಾಸ್ತ್ರ (Economic) ವಿಷಯದಲ್ಲಿ ಆರು ಸೆಮಿಸ್ಟರನಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ **ದಿ.ಶ್ರೀ ಸಾಯಪ್ಪ ಯಂಕಪ್ಪ ಮದರಿ** ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/- ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/- ಸೇರಿಸಿ ಒಟ್ಟು ರೂ. 55000/- ಗಳ ಡಿಡಿಯನ್ನು ದಿನಾಂಕ: 16-01-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಶೈಕ್ಷಣಿಕ ವರ್ಷದಿಂದ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-*

***2016-17ನೇ ಸಾಲಿನಲ್ಲಿ*** **ಸ್ನಾತಕ ಬಿ.ಎ. ಅರ್ಥಶಾಸ್ತ್ರ (Economics) ವಿಷಯದಲ್ಲಿ ಆರು ಸೆಮಿಸ್ಟರನಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ ದಿ.ಶ್ರೀ ಸಾಯಪ್ಪ ಯಂಕಪ್ಪ ಮದರಿ ಅವರ ಹೆಸರಿನಿಂದ ಚಿನ್ನದ ಪದಕ ನೀಡಲು** ***ಅನುಮೋದಿಸಲಾಯಿತು.***

**<u>ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 08*

**ವಿಷಯ:** Goutam Mehta Sindhanur ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.

ಮಾನ್ಯ ಶ್ರೀ.ಆರ್.ಸಿ ಪಾಟೀಲ್,(ದಾನಿಗಳು)ಸಿಂಡಿಕೇಟ್ ಸದಸ್ಯರು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ. ರವರು ಸ್ನಾತಕ ಬಿಎಸ್.ಸಿ ಆರು ಸೆಮಿಸ್ಟರಗಳ (ಖುಜಚಿಟುಣಡಿಥಿ) ಪತ್ರಿಕೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ **ಉಂಣಚಿಟ ಒಚಿಣಚಿ ಖುಟಿಜುಚಿಟಿಣಡಿ** ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/- ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/- ಸೇರಿಸಿ ಒಟ್ಟು ರೂ. 55000/- ಗಳ ಚೆಕ್ಕನ್ನು ದಿನಾಂಕ: 10-02-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-*

***2016-17ನೇ ಸಾಲಿನಲ್ಲಿ*** **ಸ್ನಾತಕ ಬಿ.ಎಸ್.ಸಿ ಆರು ಸೆಮಿಸ್ಟರಗಳ ರಸಾಯನಶಾಸ್ತ್ರ (ಖುಜಚಿಟುಣಡಿಥಿ) ಪತ್ರಿಕೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Goutam Mehta Sindhanur ಅವರ ಹೆಸರಿನಿಂದ ಚಿನ್ನದ ಪದಕ ನೀಡಲು** ***ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 09*

**ವಿಷಯ: Jyothi Ravi Kudligi, Dharwad ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.**

ಮಾನ್ಯ ಶ್ರೀ.ಆರ್.ಸಿ ಪಾಟೀಲ್,(ದಾನಿಗಳು) ಸಿಂಡಿಕೇಟ್ ಸದಸ್ಯರು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ. ರವರು ಪ್ರದರ್ಶಕ ಕಲೆಗಳ ಕೇಂದ್ರದ ಎಮ್. ಮ್ಯೂಜಿಕ್ ಕೋರ್ಸಿನ್ ನಾಲ್ಕು ಸೆಮಿಸ್ಟರಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ **ಎಥಿಠಣಖು ಖಚಿತು ಏಣಾಜಟುರು, ಆುಚಿಡಿತಿಚಿಜ** ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/– ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/– ಸೇರಿಸಿ ಒಟ್ಟು ರೂ. 55000/– ಗಳ ಚೆಕ್ಕನ್ನು ದಿನಾಂಕ: 23–01–2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016–17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:–*

***2016–17ನೇ ಸಾಲಿನಲ್ಲಿ* ಪ್ರದರ್ಶಕ ಕಲೆಗಳ ಕೇಂದ್ರದ ಎಮ್.ಎ. ಮ್ಯೂಜಿಕ್ ಕೋರ್ಸಿನ್ ನಾಲ್ಕು ಸೆಮಿಸ್ಟರಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Jyothi Ravi Kudligi, Dharwad ಅವರ ಹೆಸರಿನಿಂದ ಚಿನ್ನದ ಪದಕ ನೀಡಲು *ಅನುಮೋದಿಸಲಾಯಿತು.***

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 10*

2013–14 ಸಾಲಿನಲ್ಲಿ ಜರುಗಿದ ಬಿ.ಎಡ್ ಥಿಯರಿ ಪರೀಕ್ಷೆಗಳಲ್ಲಿ ಬೀದರ ಜಿಲ್ಲೆ ಸ್ಥಳಿಯ 03 ಬಿ.ಎಡ್ ಮಹಿಳಾ ಮಹಾವಿದ್ಯಾಲಯಗಳಾದ ಇಂಡಿಯನ್, ಬಿಲಾಲ್, ಏಮ್, ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳು ಕಾಲೇಜುಗಳಲ್ಲಿ ಪರೀಕ್ಷೆ ಜರುಗಿಸಿದಾಗ ಸಾಮೂಹಿಕ ನಕಲು ಪ್ರಕರಣದಡಿ ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಇವರ ಕೋರಿಕೆ ಮೇರೆಗೆ ಎಲ್ಲ ಪರೀಕ್ಷೆಗಳನ್ನು ರದ್ದು ಪಡಿಸಿ 12–06–2016 ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸರ್ಕಾರದ ಅನುಮತಿ ಪಡೆದು ಪರೀಕ್ಷೆಗಳನ್ನು ಈಗಾಗಲೇ 03 ಬಾರಿ ಬೇರೆ ಬೇರೆ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ ಪರೀಕ್ಷೆಗಳನ್ನು ನಡೆಸಲಾಗಿದೆ. ಅದರಂತೆ ಈ 03 ಮಹಾವಿದ್ಯಾಲಯಗಳಲ್ಲಿ ಬಿಲಾಲ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯ ಬೀದರ, ಈ ಕಾಲೇಜಿನಲ್ಲಿ 03 ಮಹಾವಿದ್ಯಾಲಯಗಳ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಕೇಂದ್ರವನ್ನಾಗಿ ಗುರುತಿಸಿ ಪರೀಕ್ಷೆಗಳನ್ನು ಜರುಗಿಸಲಾಗಿದೆ, 2017 ಜನೇವರಿಯಲ್ಲಿ ಜರುಗುವ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರ ನೀಡುವಂತೆ, ಕಾಲೇಜಿನ ಪ್ರಾಂಶುಪಾಲರು ಇಂಡಿಯನ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯ ಬೀದರ ಇವರು ಪತ್ರದ ಮೂಲಕ ಮನವಿ ಸಲ್ಲಿಸಿದ್ದು, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ದಿನಾಂಕ:21–01–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ

***"ಸಿ.ಸಿ.ಟಿ.ವಿ ಕ್ಯಾಮೇರಾ ಅಳವಡಿಸಿ, ಶಿಸ್ತು ಬದ್ಧವಾಗಿ ಪರೀಕ್ಷೆ ನಡೆಸಲು, ಅಕ್ರಮಗಳಿಗೆ ಅವಕಾಶ ಮಾಡುವುದಿಲ್ಲವೆಂದು ಸಂಸ್ಥೆಯ ಮುಖ್ಯಸ್ಥರಿಂದ ಮುಚ್ಚಳಿಕೆ ಪತ್ರವನ್ನು ತೆಗೆದುಕೊಂಡು* ಇಂಡಿಯನ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಬೀದರ ಇವರಿಗೆ ಪರೀಕ್ಷಾ ಕೇಂದ್ರವನ್ನು ನೀಡಲು ಅನುಮೋದಿಸಲಾಯಿತು".**

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ.

*ನಿರ್ಣಯ:–*

***ವಿದ್ಯಾವಿಷಯಕ ಪರೀಷತ್‌ನ ತೀರ್ಮಾನವನ್ನು ಒಪ್ಪಿಕೊಳ್ಳಲಾಯಿತು.***

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 11*

**ವಿಷಯ:** ಸ್ಥಳೀಯ ವಿಚಾರಣೆ ಸಮಿತಿಗೆ ಸಿಂಡಿಕೇಟ್ ಸದಸ್ಯರ ಸದಸ್ಯತ್ವದ ಬಗ್ಗೆ.

**ಉಲ್ಲೇಖ:–** 1.ಸಿಂಡಿಕೇಟ್ ಸಭೆಯ ದಿನಾಂಕ:ಳ19–12–2016, ಗೊತ್ತುವಳಿ ಸಂಖ್ಯೆ:04
2.ಸರ್ಕಾರದ ಆದೇಶದ ಸಂಖ್ಯೆ ಇಡಿ 600 ಯುಆರ್‌ಸಿ 2015, ಬೆಂಗಳೂರು ದಿನಾಂಕ:16–01–2016
3.ಸರ್ಕಾರದ ಆದೇಶದ ಸಂಖ್ಯೆ ಇಡಿ 600 ಯುಆರ್‌ಸಿ 2015, ಬೆಂಗಳೂರು ದಿನಾಂಕ:06–01–2017

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕ 2017–18 ಸಾಲಿನ ಮಹಿಳಾ ವಿಶ್ವವಿದ್ಯಾಲಯದ, ಸಂಲಗ್ನತೆ ಮಹಿಳಾ ಕಾಲೇಜುಗಳ ಮುಂದುವರಿಕೆ ಸಂಯೋಜನೆಗಾಗಿ ಸ್ಥಳೀಯ ವಿಚಾರಣೆ ಸಮಿತಿಯನ್ನು ಉಲ್ಲೇಖ:02 ರ ಸರ್ಕಾರದ ಆದೇಶದ ಪ್ರಕಾರ ಇಬ್ಬರು ಸಿಂಡಿಕೇಟ್ ಸದಸ್ಯರನ್ನು ದಿನಾಂಕ:19–12–2016ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ನೇಮಿಸಲಾಗಿತ್ತು. ನಂತರ ಉಲ್ಲೇಖ:03ರ ಸರ್ಕಾರದ ಆದೇಶದ ಪ್ರಕಾರ ಸ್ಥಳೀಯ ವಿಚಾರಣೆ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಿಸುವ ವಿಷಯವನ್ನು, ಉಲ್ಲೇಖ:02 ಆದೇಶವನ್ನು ತಕ್ಷಣ ಹಿಂಪಡೆಯಲಾಗಿದೆ ಎಂದು ಸರ್ಕಾರ ಆದೇಶ ನೀಡಿರುವ ಕಾರಣ, ನೇಮಿಸಲಾಗಿದ್ದ ಇಬ್ಬರು ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣೆ ಸಮಿತಿಯಿಂದ ಕೈಬಿಡಲಾಗಿದ್ದು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಇಡಲಾಗಿದೆ.

***ನಿರ್ಣಯ:–***

***ಅವಗಾಹನಿಸಲಾಯಿತು.***

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 12*

**ವಿಷಯ:** ದಿನಾಂಕ:23–12–2016ರಂದು ಬೆಳಿಗ್ಗೆ 11:30ಘಂಟೆಗೆ ಜರುಗಿದ ಪ.ಜಾ/ಪ.ಪಂ ಸಲಹಾ ಸಮಿತಿ ಸಭೆಯ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಪ.ಜಾ/ಪ.ಪಂ ಸಲಹಾ ಸಮಿತಿ ಸಭೆಯ ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 13*

**ವಿಷಯ:** ದಿನಾಂಕ:09–01–2017ರಂದು ಜರುಗಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯ ಹದಿನೇಳು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 14*

**ವಿಷಯ:** ದಿನಾಂಕ:09–01–2017ರಂದು ಜರುಗಿದ ಆರೋಗ್ಯ ಕೇಂದ್ರದ ಸಲಹಾ ಸಮಿತಿ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸಭೆಯ ಎಂಟು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 15*

**ವಿಷಯ:–** ದೂರ ಶಿಕ್ಷಣ ನಿರ್ದೇಶನಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದುಕೊಳ್ಳುವ ವಿದ್ಯಾರ್ಥಿನಿಯರಿಗೆ ಅಧ್ಯಯನ ಸಾಮಗ್ರಿಗಳನ್ನು (SLM/SIM) ಬರೆಯುವ ವಿಷಯ ತಜ್ಞರಿಗೆ ಪ್ರತಿ ಪತ್ರಿಕೆಗೆ ಸಂಭಾವನೆ ನಿಗದಿಪಡಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ನಿರ್ದೇಶನಾಲಯದ ಸ್ನಾತಕ(ಬಿ.ಎ, ಬಿ.ಕಾಂ) ಮತ್ತು ಸ್ನಾತಕೋತ್ತರ(ಕನ್ನಡ, ಇಂಗ್ಲೀಷ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಹಿಳಾ ಅಧ್ಯಯನ, ಎಂ.ಕಾಂ) ಕೋರ್ಸುಗಳಿಗೆ ಪ್ರವೇಶಾತಿ ಪಡೆದುಕೊಳ್ಳುವ ವಿದ್ಯಾರ್ಥಿನಿಯರಿಗೆ ಅಧ್ಯಯನ ಸಾಮಗ್ರಿಗಳನ್ನು (SLM/SIM) ಬರೆಯುವ ವಿಷಯ ತಜ್ಞರಿಗೆ ಪ್ರತಿ ವಿಷಯಕ್ಕೆ (ಪ್ರತಿ ಪತ್ರಿಕೆಗೆ) ರೂ.40,000/–ಸಂಭಾವನೆ (ಡಿಟಿಪಿ ಹೊರೆತುಪಡಿಸಿ) ಮೊತ್ತವನ್ನು ನಿಗದಿಪಡಿಸಬಹುದಾಗಿದೆ ಎಂದು ದಿನಾಂಕ: 21–01–2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯಲ್ಲಿ ***"ಸಿಂಡಿಕೇಟ್‌ನಲ್ಲಿ ತೀರ್ಮಾನಿಸಲು ನಿರ್ಣಯ ಕೈಗೊಳ್ಳಲಾಯಿತು"*** *ಆದ್ದರಿಂದ ಈ* ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

**ನಿರ್ಣಯ:–**

**ದೂರ ಶಿಕ್ಷಣ ನಿರ್ದೇಶನಾಲಯದ ಸ್ನಾತಕ(ಬಿ.ಎ, ಬಿ.ಕಾಂ) ಮತ್ತು ಸ್ನಾತಕೋತ್ತರ(ಕನ್ನಡ, ಇಂಗ್ಲೀಷ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಹಿಳಾ ಅಧ್ಯಯನ, ಎಂ.ಕಾಂ) ಕೋರ್ಸುಗಳಿಗೆ ಪ್ರವೇಶಾತಿ ಪಡೆದುಕೊಳ್ಳುವ ವಿದ್ಯಾರ್ಥಿನಿಯರಿಗೆ ಅಧ್ಯಯನ ಸಾಮಗ್ರಿಗಳನ್ನು (SLM/SIM) ಬರೆಯುವ ವಿಷಯ ತಜ್ಞರಿಗೆ ಪ್ರತಿ ವಿಷಯಕ್ಕೆ, ಪ್ರತಿ ಪತ್ರಿಕೆಯ ಪ್ರತಿ ಪುಟಕ್ಕೆ (A4 size) ರೂ.150/– ಡಿಟಿಪಿಗೆ ಒಳಪಡಿಸಿ ಸಂಭಾವನೆ ನಿಗದಿಪಡಿಸಲಾಯಿತು.**

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 16*

**ವಿಷಯ:** ಕನ್ನಡ ಹಾಗೂ ವಾಣಿಜ್ಯ ಅಧ್ಯಯನ ವಿಭಾಗದಲ್ಲಿರುವ ಸಭಾಭವನಗಳಿಗೆ ಪೀಠೋಪಕರಣಗಳನ್ನು ಖರೀದಿಸುವ ಕುರಿತು.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ ಸಭೆಗಳು ಮೇಲಿಂದ ಮೇಲೆ ಜರುಗುತ್ತಿರುವುವು, ಆದರೆ ಇಂಥ ಸಭೆಗಳನ್ನು ನಡೆಸಲು ಸಿಂಡಿಕೇಟ್ ಸಭಾಭವನ ಮಾತ್ರ ಇದ್ದು, ಇದರಿಂದ ಕೆಲವು ಸಂಧರ್ಬದಲ್ಲಿ ಒಂದೇ ಸಮಯದಲ್ಲಿ ಬೇರೆ ಬೇರೆ ಸಭೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಕಾರಣ ಕನ್ನಡ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಪೀಠೋಪಕರಣಗಳನ್ನು ಅಳವಡಿಸಿದಲ್ಲಿ, ಅಂದಾಜು 200ಜನ ಕುಳಿತುಕೊಳ್ಳುವ ಸಾಧ್ಯತೆ ಇರುತ್ತದೆ. ಈಗಾಗಲೇ ಮಾನ್ಯ ಕುಲಪತಿಗಳ ಕಾರ್ಯಾಲಯಕ್ಕೆ 25 ಖುರ್ಚಿಗಳನ್ನು (Peacock Model) ಖರೀದಿಸಲಾಗಿದ್ದು, ಅದರಂತೆ ಹಂತ ಹಂತವಾಗಿ ಕನ್ನಡ ಸಭಾಭವನಕ್ಕೆ ಖುರ್ಚಿಗಳನ್ನು ಮತ್ತು ಟೇಬಲಗಳನ್ನು, ಎ.ಸಿ, ಸ್ಕ್ರೀನ್ ಇತ್ಯಾದಿ ಖರೀದಿಸುವ ಸಲುವಾಗಿ ಪೂರೈಕೆ ಅಥವಾ ಮರುಪೂರೈಕೆ ಆದೇಶವನ್ನು ನೀಡಿ ಖರೀದಿಸುವ ಸಲುವಾಗಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ಒಂದೇ ಸಮಯದಲ್ಲಿ ಬೇರೆ ಬೇರೆ ಸಭೆಗಳನ್ನು ನಡೆಸಲು ಕನ್ನಡ ಹಾಗೂ ವಾಣಿಜ್ಯ ಅಧ್ಯಯನ ವಿಭಾಗದಲ್ಲಿರುವ, ಸಭಾಭವನಗಳಿಗೆ ಅಂದಾಜು 200ಜನ ಕುಳಿತುಕೊಳ್ಳುವ ಖುರ್ಚಿಗಳನ್ನು (Peacock Model) ಮತ್ತು ಟೇಬಲಗಳನ್ನು, ಎ.ಸಿ, ಸ್ಕ್ರೀನ್ ಇತ್ಯಾದಿ ಖರೀದಿಸುವ ಸಲುವಾಗಿ ಪೂರೈಕೆ ಅಥವಾ ಮರುಪೂರೈಕೆ ಆದೇಶವನ್ನು ನೀಡಿ ಖರೀದಿಸಲು ಅನುಮೋದಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 17*

**ವಿಷಯ:** ಗಣಕ ಯಂತ್ರಗಳನ್ನು ಸುಸ್ಥಿತಿಯಲ್ಲಿಡಲು AMCಗೆ ಕೊಡುವುದು ಅಥವಾ ಗೌರವಧನ ಆಧಾರದ ಮೇಲೆ ತಾಂತ್ರಿಕ ಸಿಬ್ಬಂಧಿಗಳನ್ನು ನೇಮಕ ಮಾಡುವ ಕುರಿತು.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಒಟ್ಟಾರೆ 250 ಗಣಕಯಂತ್ರಗಳು ಮತ್ತು 100 ಲ್ಯಾಪಟಾಪ್‌ಗಳು ಇರುತ್ತವೆ. ಮತ್ತು ಸದರಿ ಗಣಕಯಂತ್ರ/ಲ್ಯಾಪಟಾಪ್‌ಗಳನ್ನು ಸುಸ್ಥಿಯಲ್ಲಿಡಲು ವಾರ್ಷಿಕ ಮೇಲ್ವಿಚಾರಣೆಗೆ ಗುತ್ತಿಗೆಯನ್ನು AMC ನೀಡಬೇಕಾಗುತ್ತದೆ, ಅವುಗಳಿಗೆ ಪ್ರತಿ ವರ್ಷಕ್ಕೆ ಅಂದಾಜು ರೂ.10,00,000/- ವೆಚ್ಚವಾಗುವ ಸಾಧ್ಯತೆ ಇರುತ್ತದೆ. ಅಥವಾ ನುರಿತ ತಾಂತ್ರಿಕ ಸಿಬ್ಬಂದಿ (Diploma in Electronics and Electrical)ಯನ್ನು ನೇಮಕ ಮಾಡಿಕೊಳ್ಳಬಹುದು. ಇದರಿಂದ ಗಣಕಯಂತ್ರ/ ಲ್ಯಾಪಟಾಪ್‌ಗಳಿಗೆ ತಗಲುವ ವಾರ್ಷಿಕ ವೆಚ್ಚಕ್ಕಿಂತ ಉಳಿಯುವ ಸಾಧ್ಯತೆ ಇರುತ್ತದೆ ಮತ್ತು ಗಣಕಯಂತ್ರ/ಲ್ಯಾಪಟಾಪ್‌ಗಳ ದುರಸ್ಥಿ ಕಾರ್ಯವು ಕಡಿಮೆ ಸಮಯದಲ್ಲಿ ಆಗುವುದರಿಂದ ನುರಿತ ತಾಂತ್ರಿಕ ವಿದ್ಯಾರ್ಹತೆಯ ಕನಿಷ್ಟ ಇಬ್ಬರು ಅಭ್ಯರ್ಥಿಯನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಇರುವ ಗಣಕಯಂತ್ರ ಮತ್ತು ಲ್ಯಾಪಟಾಪ್‌ಗಳನ್ನು ಸುಸ್ಥಿಯಲ್ಲಿಡಲು ಇಬ್ಬರು ನುರಿತ ತಾಂತ್ರಿಕ ಸಿಬ್ಬಂಧಿಗಳನ್ನು (Diploma in Electronics and Electrical), ಗರಿಷ್ಟ ರೂ.15,000/- ಮೀರದಂತೆ, ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 18*

**ವಿಷಯ:** ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ - ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ

ವಿಶ್ವವಿದ್ಯಾಲಯ, ವಿಜಯಪುರದ ವಿವಿಧ ವೃಂದಗಳಲ್ಲಿ ಹೈದ್ರಾಬಾದ್ – ಕರ್ನಾಟಕ ಪ್ರದೇಶದವರಿಗೆ ಶೇ.8ರಷ್ಟು ಹುದ್ದೆಗಳನ್ನು ಗುರುತಿಸಿ, ಸ್ಥಳೀಯ ವೃಂದ ರಚಿಸಿ ಅಧಿಸೂಚಿಸುವ ಬಗ್ಗೆ.

**ಉಲ್ಲೇಖ:–** ಇಡಿ 105 ಎಂವಿವಿ 2015 ದಿನಾಂಕ:10–1–2017.

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಗಳ–2 ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 105 ಎಂವಿವಿ 2015 ದಿನಾಂಕ:10–1–2017ರನ್ವಯ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರವು ಭಾರತ ಸಂವಿಧಾನ ಅನುಚ್ಛೇಧ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೈದ್ರಾಬಾದ – ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಸ್ಥಳೀಯ ವೃಂದ ರಚಿಸಿ ಅಧಿಸೂಚನೆ ಹೊರಡಿಸಲು ತಿಳಿಸಿರುತ್ತಾರೆ. ಸದರಿ ಸರ್ಕಾರದ ಆದೇಶವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–***

***ಅನುಮೋದಿಸಲಾಯಿತು.***

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 19*

ವಿಶ್ವವಿದ್ಯಾಲಯದ ಜ್ಞಾನಶಕ್ತಿ ಕ್ಯಾಂಪಸ್ Networking ಸಲುವಾಗಿ wi-fi Internet ಅಳವಡಿಸುವದಕ್ಕೆ ಸಂಬಂಧಿಸಿದಂತೆ Indoor, Outdoor acess point, core switches, ಮತ್ತು Higher end fire wall ಮುಂತಾದ ಉಪಕರಣಗಳನ್ನು ಅಳವಡಿಸ ಬೇಕಾಗಿರುತ್ತದೆ. ಈಗಾಗಲೇ ರೂಸಾ ಅನುದಾನ ಅಡಿಯಲ್ಲಿ ರೂ.72,00,000/ ವೆಚ್ಚದಲ್ಲಿ Optical Fiber Cableಗಳನ್ನು ಅಳವಡಿಸಲಾಗಿದೆ. ಪ್ರಸ್ತುತ ಮೇಲೆ ನಮೂದಿಸಿರುವ ಸಲಕರಣೆಗಳನ್ನು ಉಪಯೋಗಿಸಿದರೆ ಮಾತ್ರ 1gbps ಇಂಟರ್‌ನೆಟ್ ಸೌಲಭ್ಯವನ್ನು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸೂಕ್ತವಾಗಿ ಉಪಯೋಗಿಸಬಹುದಾಗಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ರೂ. 1.74ಕೋಟಿ ಆಗಿದ್ದು, ಈ ಕುರಿತು ಈಗಾಗಲೇ ಟೆಂಡರ್ ಕರೆಯಲಾಗಿದೆ. ಈ ಪೂರ್ಣ ಪ್ರಕ್ರಿಯೆಗೆ ಅನುಮತಿ ನೀಡಲು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದೆ.

***ನಿರ್ಣಯ:–***

**ವಿಶ್ವವಿದ್ಯಾಲಯದ ಜ್ಞಾನಶಕ್ತಿ ಕ್ಯಾಂಪಸ್ Networking ಸಲುವಾಗಿ wi-fi Internet ಅಳವಡಿಸುವದಕ್ಕೆ ಸಂಬಂಧಿಸಿದಂತೆ Indoor, Outdoor acess point, core switches, ಮತ್ತು Higher end fire wall ಮುಂತಾದ ಉಪಕರಣಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. 1.74ಕೋಟಿಗೆ *ಅನುಮೋದನೆ ನೀಡಲಾಯಿತು.***

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 20*

**ವಿಷಯ:** ಮಂಡ್ಯ ನಗರದಲ್ಲಿ ಒಂದು ಕಛೇರಿಯನ್ನು ತೆಗೆಯಲು ಕಟ್ಟಡವನ್ನು ಬಾಡಿಗೆಗೆ ಪಡೆದುಕೊಳ್ಳುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಂಡ್ಯ ಹೊರಾವರಣ ಕೇಂದ್ರದ ಆಡಳಿತ ಕಛೇರಿಯನ್ನು ಮಂಡ್ಯ ನಗರದಲ್ಲಿ ಪ್ರಾರಂಭಿಸಲಾಗಿತ್ತು. ನಂತರ ವಿಶ್ವವಿದ್ಯಾಲಯದ ಆದೇಶದಂತೆ ಮಂಡ್ಯದಲ್ಲಿದ್ದ ಆಡಳಿತ

ಕಛೇರಿಯನ್ನು ದಿನಾಂಕ:31-8-2015 ರಂದು ಬಿ.ಹೊಸೂರು ಕಾಲೋನಿಯಲ್ಲಿರುವ ವಿಶ್ವವಿದ್ಯಾಲಯದ ಕಟ್ಟಡಕ್ಕೆ ವರ್ಗಾವಣೆ ಮಾಡಲಾಯಿತು. ಆದರೆ ಬಿ.ಹೊಸೂರು ಕಾಲೋನಿಯು ಮಂಡ್ಯ ನಗರದಿಂದ 11ಕಿ.ಮೀ ದೂರ ಇರುವುದರಿಂದ ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರಿಗೆ ಹಾಗೂ ನಮ್ಮ ಕಛೇರಿ ಕೆಲಸಗಳಿಗೂ ತೊಂದರೆಯಾಗುತ್ತಿದೆ. ಅಲ್ಲದೆ ವಿಶ್ವವಿದ್ಯಾಲಯದ ಬಸ್ಸನ್ನು ರಾತ್ರಿ ವೇಳೆ ಮಂಡ್ಯ ನಗರದಲ್ಲಿ ನಿಲ್ಲಿಸಲು ಸೂಕ್ತ ಸ್ಥಳದ ತೊಂದರೆಯಾಗುತ್ತಿದ್ದು, ಮಂಡ್ಯ ನಗರದಲ್ಲಿ ಕಛೇರಿ ತೆರೆದರೆ ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರಿಗೆ, ಪೋಷಕರಿಗೆ ಹಾಗೂ ವಿಶ್ವವಿದ್ಯಾಲಯದ ಬಸ್ಸುನ್ನು ಕಛೇರಿಯ ಬಳಿ ನಿಲ್ಲಿಸಲು ಅನುಕೂಲವಾಗುತ್ತದೆ. ಆದ್ದುದರಿಂದ ಮಂಡ್ಯ ನಗರದಲ್ಲಿ ಒಂದು ಕಛೇರಿಯನ್ನು ಪುನ: ತೆರೆಯಲು ಒಂದು ಕಟ್ಟಡವನ್ನು ಬಾಡಿಗೆಗೆ ಪಡೆದುಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

**ಮಂಡ್ಯ ನಗರದಲ್ಲಿ ಒಂದು ಕಛೇರಿಯನ್ನು ತೆರೆಯಲು ಅದಕ್ಕೆ ಕಟ್ಟಡವನ್ನು *PWD SR ದರದ ಅನ್ವಯ* ಬಾಡಿಗೆಗೆ ಪಡೆದುಕೊಳ್ಳಲು ತೀರ್ಮಾನಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 21*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಂಡ್ಯ ಹೊರಾವರಣ ಕೇಂದ್ರ 2014-15ನೇ ಸಾಲಿನಿಂದ ಐದು ವಿಭಾಗಗಳು (ಕನ್ನಡ, ಇಂಗ್ಲೀಷ, ಮಹಿಳಾಅಧ್ಯಯನ, ಗಣಿತಶಾಸ್ತ್ರ ಮತ್ತು ಎಂ.ಕಾಂ)ಕಾರ್ಯನಿರ್ವಹಿಸುತ್ತಿದ್ದು, 2017-18ನೇ ಸಾಲಿನಿಂದ ಮಂಡ್ಯ ನಗರದಲ್ಲಿ ತೆರೆಯುವ ಕಛೇರಿಯಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

1. Yoga Studies
2. Fashion Technology
3. Distance Education.

*ನಿರ್ಣಯ:-* **2017-18ನೇ ಸಾಲಿನಿಂದ ಮಂಡ್ಯ ಹೊರಾವರಣ ಕೇಂದ್ರದಲ್ಲಿ ಯೋಗ ಅಧ್ಯಯನ ಕೋರ್ಸ್‌ನ್ನು ಪ್ರಾರಂಭಿಸಲು ಅನುಮೋದಿಸಲಾಯಿತು.**

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 22*

**ವಿಷಯ: ದಿನಾಂಕ:03-03-2017 ರಿಂದ 11-03-2017 ರವರೆಗೆ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ 09 ದಿನಗಳ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:03-03-2017 ರಿಂದ 11-03-2017 ರವರೆಗೆ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ 09 ದಿನಗಳ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಜ್ಞಾನಶಕ್ತಿ ಆವರಣದಲ್ಲಿ ವಿವಿಧ ವಿಭಾಗಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ದಿನಾಂಕ:11-03-2017 ರಂದು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು ಸಮಾರೋಪ ಕಾರ್ಯಕ್ರಮ ಮತ್ತು ಮಹಿಳಾ ವಿಶ್ವವಿದ್ಯಾಲಯದ ಪುನರ್ ನಾಮಕರಣ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

**ಕಾರ್ಯಕ್ರಮಗಳ ವಿವರ:**

1. ದಿನಾಂಕ:03-03-2017 & 04-03-2017 ರಂದು ಗಣಕಯಂತ್ರ ಅಧ್ಯಯನ ವಿಭಾಗದಿಂದ ರಾಷ್ಟ್ರೀಯ ಸಮ್ಮೇಳನ.
2. ದಿನಾಂಕ:04-03-2017 & 05-03-2017 ರಂದು ಸ್ತನ ಕ್ಯಾನ್ಸರ್ ಪರೀಕ್ಷೆ, ರಕ್ತ ಗುಂಪು ಮತ್ತು ಕಣ್ಣುಗಳ ಸ್ಕ್ರೀನಿಂಗ್ ಶಿಬಿರ.
3. ದಿನಾಂಕ:06-03-2017 & 07-03-2017 ರಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಪತ್ರಕರ್ತೆಯರ ಸಮ್ಮೇಳನ.
4. ದಿನಾಂಕ:08-03-2017 & 09-03-2017ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮಹಿಳಾ ಅಧ್ಯಯನ ವಿಭಾಗ ಸಾಹಿತ್ಯಿಕ ವಿಚಾರಗೋಷ್ಠಿ ಮತ್ತು ಕವಿಗೋಷ್ಠಿ ಕಾರ್ಯಕ್ರಮದ ಆಯೋಜನೆ.
5. ದಿನಾಂಕ: 10-03-2017 ರಂದು ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ವಿವಿಧ ಸ್ಪರ್ಧೆಗಳು.
6. ದಿನಾಂಕ: 11-03-2017 ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಂದ 09 ದಿನಗಳ ಕಾರ್ಯಕ್ರಮದ ಸಮಾರೋಪ ಸಮಾರಂಭ, ವಿಶ್ವವಿದ್ಯಾಲಯದ ಪುನರ್ ನಾಮಕರಣ ಕಾರ್ಯಕ್ರಮ, ದೇವದಾಸಿ ಅಧ್ಯಯನ ವರದಿ ಬಿಡುಗಡೆ ಹಾಗೂ ಪ್ರಸಾರಾಂಗದ ಪುಸ್ತಕ ಬಿಡುಗಡೆ ಸಮಾರಂಭ.
7. ದಿನಾಂಕ:03-03-2017 ರಿಂದ 11-03-2017ರವರೆಗಿನ 09 ದಿನಗಳ ಕಾರ್ಯಕ್ರಮದ ಜೊತೆಗೆ ಗ್ರಂಥಾಲಯದಿಂದ ಪುಸ್ತಕ ಪ್ರದರ್ಶನ, ಪ್ರಸಾರಾಂಗದಿಂದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆ, ಇತಿಹಾಸ ವಿಭಾಗದಿಂದ ಐತಿಹಾಸಿಕ ಸ್ಮಾರಕಗಳ ಛಾಯಾಚಿತ್ರ ಪ್ರದರ್ಶನ, ಬಿ.ಇಡಿ. ವಿಭಾಗದಿಂದ Teaching Aids & Science ಪ್ರದರ್ಶನ, ಪೇಪರ್ ಪುನರುತ್ಪಾದನಾ ಘಟಕದಿಂದ ಫೈಲ್, visiting cards, bags & pocketsಗಳ ಪ್ರದರ್ಶನ ಹಾಗೂ ಆಹಾರ ಮತ್ತು ಸಂಸ್ಕರಣ ಘಟಕದಿಂದ ಏಳು ದಿನಗಳ ಕಾರ್ಯಾಗಾರ.

**ಸಾಂಸ್ಕೃತಿಕ ಕಾರ್ಯಕ್ರಮಗಳು:**

ಪ್ರದರ್ಶಕ ಕಲೆಗಳ ಕೇಂದ್ರ ಹಾಗೂ ವಿವಿಧ ವಿಭಾಗಗಳಿಂದ ಸಮೂಹ ಗೀತೆ, ಸಮೂಹ ನೃತ್ಯ, ನಾಟಕ, ಮೈಮ್, ಕರೋಕೆ ಹಾಡುಗಳು, ಸುಗಮ ಸಂಗೀತ, ಯಕ್ಷಗಾನ ಹಾಗೂ ಜಾನಪದ ನೃತ್ಯ.

***ನಿರ್ಣಯ:- ಅನುಮೋದಿಸಲಾಯಿತು.***

**<u>ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 23*

**ವಿಷಯ:** M/s Kannana Bookstall, Vijayapur ರವರ ಬಿಲ್ಲು ಪಾವತಿಸುವ ಕುರಿತು.

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಮೌಲ್ಯಮಾಪನ ಕುಲಸಚಿವರು ಬೇಕಾದ ಸ್ಟೇಶನರಿ ಸಾಮಗ್ರಿಗಳನ್ನು **M/s Kannana Bookstall, Vijayapur** ರವರಿಂದ ದಿನಾಂಕ: 19.11.2015 ರಂದು ಖರೀದಿಸಿರುತ್ತಾರೆ. ಸದರಿಯವರಿಗೆ ಇಲ್ಲಿಯವರೆಗೆ ಖರೀದಿಸಿದ ಮೊತ್ತವನ್ನು ಪಾವತಿ ಮಾಡದೆ ವಿಳಂಬವನ್ನು ಮಾಡಿರುತ್ತಾರೆ. **M/s Kannana Bookstall, Vijayapur** ರವರು ಬಿಲ್ಲ ನಂ 1119, ದಿನಾಂಕ: 19.11.2015ರಂದು ಪಾವತಿಗಾಗಿ ಬಿಲ್ಲನ್ನು ಸಲ್ಲಿಸಿರುತ್ತಾರೆ. ಬಿಲ್ಲಿನ ವಿವರ ಈ ಕೆಳಗಿನಂತಿರುತ್ತದೆ.

| Sl.No. | Particulars | Bill No/Date | Quantity | Amount |
|---|---|---|---|---|
| 01 | Coding Covers Cod- | 1119/19.11.2015 | 5000 | 49,500/- |

| | | | | |
|---|---|---|---|---|
| | ing Brown Covers Small Size | | 0250 | |
| 02 | Coding Covers Coding Brown Covers Small Size | 1147/16-12-2015 | 5000 0250 | 49,500/- |
| 03 | Coding Covers Coding Brown Covers Small Size | 386/08-11-2016 | 5000 0250 | 49,500/- |
| | | | Total | 1,48,500/- |

ಕಾರಣ ಮೇಲ್ಕಂಡ ಬಿಲ್ಲನ್ನು ಪಾವತಿಸುವ ಸಲುವಾಗಿ ಸಿಂಡಿಕೇಟ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

*ನಿರ್ಣಯ:–* **M/s Kannana Bookstall, Vijayapur** ಅವರ ಬಿಲ್ಲುಗಳನ್ನು ಪಾವತಿಸಲು *ಅನುಮೋದಿಸಲಾಯಿತು.*

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 24*

ವಿಷಯ:– ಪರಿಷ್ಕೃತ ವಿವಿಧ ವಿಭಾಗಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪರಿನಿಯಮಾವಳಿಗಳನ್ನು ಅನುಮೋದಿಸುವ ಕುರಿತು.

ಪರಿಷ್ಕೃತ ವಿವಿಧ ಕೋರ್ಸ್‌ಗಳ ಪರಿನಿಯಮಾವಳಿಗಳು ಈ ಕೆಳಗಿನಂತಿವೆ

1. Statute of 17 departments of Karanataka State Women's University, Vijayapura.
2. Statute of 11 departments of PG Centre Sindhanur, KSWU, Vijayapura.
3. Statute of PG Centre, Sindhanur, KSWU, Vijayapura.
4. Statute of 5 department of Mandya Extension Centre KSWU, Vijayapura.
5. Statute of Mandya Extension Centre, KSWU Vijayapura.

ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ, ಮಂಡ್ಯ ಹಾಗೂ ಸಿಂಧನೂರು ಸ್ನಾತಕೋತ್ತರ ಕೇಂದ್ರಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪರಿನಿಯಮಾವಳಿಗಳನ್ನು ಅನುಮೋದಿಸಲಾಯಿತು.*

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 25*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಸಿ.ಪಾಟೀಲ ಇವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

1. **ವಿಷಯ:** ಸಿಂಧನೂರು ಸರಕಾರಿ ಮಹಿಳಾ ಮಹಾವಿದ್ಯಾಲಯವನ್ನು ಸಿಂಧನೂರು ಮಹಿಳಾ ಸ್ನಾತಕೋತ್ತರ ಕೇಂದ್ರದ ಆಡಳಿತ ವ್ಯಾಪ್ತಿಗೆ ಒಳಪಡಿಸುವ ಕುರಿತು.

ಸಿಂಧನೂರಿನಲ್ಲಿ ಇರುವ ಸರಕಾರಿ ಮಹಿಳಾ ಮಹಾವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣೆಗಾಗಿ ಅದರ ಆಡಳಿತವನ್ನು ಸಿಂಧನೂರು ಮಹಿಳಾ ಸ್ನಾತಕೋತ್ತರ ಕೇಂದ್ರದ ಆಡಳಿತ ವ್ಯಾಪ್ತಿಗೆ ಒಳಪಡಿಸಬೇಕು. ಈ ವಿಷಯವನ್ನು ಸಿಂಡಿಕೇಟ್ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:–*

***ಸರಕಾರಿ ಮಹಿಳಾ ಮಹಾವಿದ್ಯಾಲಯ, ಸಿಂಧನೂರು ಅವರ ಕಾಲೇಜ ಅಭಿವೃದ್ಧಿ ಮಂಡಳಿ(CDC) ಅವರಿಂದ ಪ್ರಸ್ತಾವನೆ ಅಥವಾ ಸಾರ್ವಜನಿಕರಿಂದ ವಿನಂತಿಪತ್ರ ಬಂದಲ್ಲಿ, ಈ ವಿಷಯ ಕುರಿತು ಮುಂದಿನ ಕ್ರಮಕೈಗೊಳ್ಳಲು ಸರಕಾರಕ್ಕೆ ಪತ್ರ ಬರೆಯಲಾಗುವುದು ಎಂದು ತಿಳಿಸಲಾಯಿತು. ಅದಕ್ಕೆ ಎಲ್ಲ ಸಿಂಡಿಕೇಟ್ ಸದಸ್ಯರು ಒಮ್ಮತದಿಂದ ಒಪ್ಪಿದರು.***

**2. ವಿಷಯ: ಎನ್.ಎಸ್.ಎಸ್. ಭವನ ನಿರ್ಮಿಸುವ ಕುರಿತು.**

ವಿಶ್ವವಿದ್ಯಾಲಯದಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್. ಭವನದ ನಿರ್ಮಾಣಕ್ಕಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಂದ ರೂ.50/–ಗಳನ್ನು ಸಂಗ್ರಹಿಸುವ ಕುರಿತು. ಈ ವಿಷಯವನ್ನು ಸಿಂಡಿಕೇಟ್ ಅನುಮೋದನೆಗಾಗಿ ಸಲ್ಲಿಸಲಾಗಿದೆ

*ನಿರ್ಣಯ:–*

***2017–18ನೇ ಸಾಲಿನಲ್ಲಿ* ಎಲ್ಲ ಮಹಾವಿದ್ಯಾಲಯಗಳ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಂದ *ವಿಶ್ವವಿದ್ಯಾಲಯದಲ್ಲಿ ಎನ್.ಎಸ್.ಎಸ್. ಭವನದ ನಿರ್ಮಾಣಕ್ಕಾಗಿ* ರೂ.50/– ಶುಲ್ಕಗಳನ್ನು ಸಂಗ್ರಹಿಸಲು ತೀರ್ಮಾನಿಸಲಾಯಿತು.**

**<u>ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 26*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ. ಭಾವಿಕಟ್ಟಿ ಇವರು ಈ ಕೆಳಕಂಡ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.**

**ವಿಷಯ:** ಶ್ರೀ ರಾಘವೇಂದ್ರ ಕಟಗೇರಿ ಇವರಿಗೆ ವಾಹನ ಚಾಲಕರ ಹುದ್ದೆ ನೀಡುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ, ಶ್ರೀ ರಾಘವೇಂದ್ರ ಕಟಗೇರಿ ವಾಹನ ಚಾಲಕರೆಂದು ದಿನಾಂಕ:26–2–2004 ರಿಂದ 6–8–2013ರ ವರೆಗೆ ಸೇವೆ ಸಲ್ಲಿಸಿದ್ದು, ದಿನಾಂಕ:1–7–2013 ರಂದು ಶ್ರೀ ರವಿಂದ್ರ ತರ್ಲಗಟ್ಟ, ದ್ವಿ.ದ.ಸ ಇವರ ಮೇಲೆ ದೈಹಿಕ ಹಲ್ಲೆ ಮಾಡಿದ ಕಾರಣಕ್ಕಾಗಿ ದಿನಾಂಕ:28–10–2013ರಂದು ಆದೇಶದಲ್ಲಿ ದಿನಾಂಕ:6–8–2013 ರಿಂದ ಕ್ಲಾಸ್–IV$^{th}$ ಕಾರ್ಯನಿರ್ವಹಿಸಲು ಆದೇಶ ಹೊರಡಿಸಲಾಗಿರುತ್ತದೆ. ಶ್ರೀ ರವಿಂದ್ರ ತರ್ಲಗಟ್ಟ ಇವರು ದೈಹಿಕ ಹಲ್ಲೆ ಸಂಬಂಧ ಪೋಲಿಸ ಠಾಣೆಯಲ್ಲಿ ಮುಕದ್ದಮೆ ದಾಖಲಿಸಿದರು. ಸದರಿ ದಾಖಲೆಯ ವಿಚಾರಣೆ ನ್ಯಾಯಾಲಯದಲ್ಲಿ ಜರುಗಿದ್ದು, ದಿನಾಂಕ:28–2–2014 ರಂದು ಶ್ರೀ ರಾಘವೇಂದ್ರ ಕಟಗೇರಿ ಇವರು ಯಾವುದೇ ಅಪರಾಧ ಮಾಡಿಲ್ಲವೆಂದು ತೀರ್ಪು ನೀಡಿ ಪ್ರಕರಣ ಖುಲಾಸೆ ಮಾಡಿರುತ್ತಾರೆ. ಆದುದರಿಂದ ಸದರಿಯವರಿಗೆ ವಾಹನ ಚಾಲಕರ ಹುದ್ದೆ ನೀಡಿ ಅವರಿಗಾಗುತ್ತಿರುವ ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕೆಂದು ಕೋರಲಾಗಿದೆ.

*ನಿರ್ಣಯ:–*

***ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಿ,* ಶ್ರೀ ರಾಘವೇಂದ್ರ ಕಟಗೇರಿ ಅವರು *ಈ ಹಿಂದೆ ಗಂಭೀರ ಅಪಘಾತಕ್ಕೆ ಒಳಗಾಗಿದ್ದರಿಂದ* ವಾಹನ ಚಾಲನೆ(ಡ್ರೈವ)ಗೆ ಅರ್ಹರಾಗಿದ್ದಾರೆ ಎಂದು**

ವೈದ್ಯಕೀಯ ತಪಾಸಣೆ ಮಾಡಿಸಿ, ***Medical Certificate*** ತಂದರೆ ಮುಂದಿನ ದಿನಗಳಲ್ಲಿ ಅವರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಎಂದು ತೀರ್ಮಾನಿಸಲಾಯಿತು.

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 01*

**ವಿಷಯ:** ದಿನಾಂಕ:12–01–2017ರಂದು ಜರುಗಿದ ಪ್ರಕಟಣಾ ಸಲಹಾ ಸಮಿತಿ ಸಭೆಯ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಶ್ರೀ ಆರ್.ಸಿ.ಪಾಟೀಲ ಅವರು ಪದವಿ ಭಾಷಾ ಪಠ್ಯ ಪುಸ್ತಕಗಳನ್ನು 2017–18ನೇ ಸಾಲಿನಿಂದ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಲು ನಿರ್ಣಯಿಸಿದ್ದಕ್ಕೆ ಅಭಿನಂದಿಸಿದರು.**

**ಪ್ರಕಟಣಾ ಸಲಹಾ ಸಮಿತಿ ಸಭೆಯ ಐದು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 02*

ಪಿಎಚ್.ಡಿ ಕ್ರಮನಿಯಮಾವಳಿ 7.4.1ರ ಪ್ರಕಾರ Candidates having M.Phil claim on exemption for appearing from the entrance test ಈ ನಿಯಮದ ಪ್ರಕಾರ ಪಿಎಚ್.ಡಿ ಪ್ರವೇಶಕ್ಕೆ ಎಂ.ಫಿಲ್ ಪದವಿ ಪ್ರಧಾನಗೊಂಡ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳದೆ ನೇರವಾಗಿ ಪಿಎಚ್.ಡಿಗೆ ಪ್ರವೇಶ ಪಡೆಯಲು ನಿಯಮವಿದೆ. ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಯನ್ನು ನಿರ್ದಿಷ್ಠ ಅವಧಿಯಲ್ಲಿ ಸಂಶೋಧನಾ ಕಾರ್ಯ ಪೂರ್ಣಗೊಳಿಸಿ ಮಹಾಪ್ರಬಂಧವನ್ನು ಸಲ್ಲಿಸಿದಂತಹ ಹಾಗೂ ಅಧಿಸೂಚನೆ ಹೊರಡಿಸದೇ ಇರುವಂತ ವಿದ್ಯಾರ್ಥಿನಿಯರು ಪಿಎಚ್.ಡಿಗೆ ಪ್ರವೇಶ ಪಡೆಯಲು ಕೋರುತ್ತಿದ್ದು, ಇಂಥ ವಿದ್ಯಾರ್ಥಿನಿಗಳನ್ನು ಪಿಎಚ್.ಡಿ ಅಧ್ಯಯನದ ಆಯ್ಕೆ ಪಟ್ಟಿಯಲ್ಲಿ ಸೇರಿಸುವ ಅಥವಾ ಸೇರಿಸದೇ ಇರುವ ಗೊಂದಲಗಳು ಉಂಟಾಗಿರುವುದರಿಂದ ಸ್ಪಷ್ಠ ನಿಯಮವನ್ನು ರೂಪಿಸುವ ಅಗತ್ಯತೆ ಇದ್ದ ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಅವಗಾಹನೆಗಾಗಿ ಮಂಡಿಸಿದೆ.

*ನಿರ್ಣಯ:–*

***ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಮತ್ತು ಇತರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪರೀಕ್ಷೆಗೆ ಹಾಜರಾಗಿ ಮಹಾಪ್ರಬಂಧವನ್ನು ಸಲ್ಲಿಸಿದಂತಹ ವಿದ್ಯಾರ್ಥಿಗಳು ಪಿಎಚ್.ಡಿ ಪ್ರವೇಶಾತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು. ಅಂತಹ ವಿದ್ಯಾರ್ಥಿಗಳ ಫಲಿತಾಂಶ ಪಿಎಚ್.ಡಿ ಮೌಖಿಕ ಸಂದರ್ಶನದ ವೇಳೆಗೆ ಪ್ರಕಟವಾಗದಿದ್ದಲ್ಲಿ(Result Declar) ಅವರು ಪ್ರವೇಶ ಪರೀಕ್ಷೆಯಿಂದ ರಿಯಾಯತಿ (Exemption) ನೀಡಿ ನೇರವಾಗಿ ಪಿಎಚ್.ಡಿ ಮೌಖಿಕ ಸಂದರ್ಶನಕ್ಕೆ ಪರಿಗಣಿಸಲು ತೀರ್ಮಾನಿಸಲಾಯಿತು.***

***ಆದರೆ ಅಂಥ ವಿದ್ಯಾರ್ಥಿನಿಗಳು ಎಂ.ಫಿಲ್ ಪರೀಕ್ಷೆಯಲ್ಲಿ ಅನುತ್ತೀರ್ಣ(ಫೇಲ್) ಆದರೆ ಅವರಿಗೆ ನೀಡಿದ ಪಿಎಚ್.ಡಿ ಪ್ರವೇಶಾತಿ(ಸೀಟ್) ಹಿಂಪಡೆಯುವ ಷರತ್ತಿನೊಂದಿಗೆ ಅನುಮೋದಿಸಲಾಯಿತು.***

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 03*

ಇಂಗ್ಲೀಷ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ ಡಾಕ್ಟೋರಲ್ ಸಮಿತಿಯನ್ನು ಈಗಾಗಲೇ ರಚಿಸಿ ದಿನಾಂಕ:13-01-2015ರಂದು ಆದೇಶವನ್ನು ನೀಡಲಾಗಿತ್ತು. ಡಾ.ವ್ಹಿ.ಎಫ್ ನಾಗನ್ನವರ ಬಾಹ್ಯ ಸದಸ್ಯರು ಆಗಿದ್ದು, ಅವರ ಅವಧಿ ಮೂರು ವರ್ಷ ಇರುತ್ತದೆ. ಆದರೆ ಸದರಿ ವಿಭಾಗದ ಮುಖ್ಯಸ್ಥರ ಪತ್ರದನ್ವಯ ಡಾ.ವ್ಹಿ.ಎಫ್. ನಾಗನ್ನವರ ಬದಲಾಗಿ ಡಾ.ಎನ್.ಎಚ್.ಕಲ್ಲೂರು ಅವರಿಗೆ ದಿನಾಂಕ:4-2-2017ರಿಂದ ಡಾಕ್ಟೋರಲ್ ಸಮಿತಿಯ ಸದಸ್ಯರು ಎಂದು ಮುಂದಿನ ಆದೇಶದ ವರೆಗೆ ಆದೇಶಿಸಬೇಕಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅಹುಮೋದನೆಗಾಗಿ ಮಂಡಿಸಿದೆ.

**ಡಾಕ್ಟೋರಲ್ ಸಮಿತಿಯ ಸಭೆಯ ಅಧ್ಯಕ್ಷರು ಹಾಗೂ ಸದಸ್ಯರ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ | ಸದಸ್ಯರ ಹೆಸರು | ಪದನಾಮ |
|---|---|---|
| 1. | ಡೀನರು ಕಲಾ ನಿಕಾಯ | ಅಧ್ಯಕ್ಷರು |
| 2. | ಮುಖ್ಯಸ್ಥರು ಇಂಗ್ಲೀಷ ಅಧ್ಯಯನ ವಿಭಾಗ, ಕರಾಮವಿವಿ | ಸದಸ್ಯರು |
| 3. | ಅಧ್ಯಯನ ಮಂಡಳಿಯ ಅಧ್ಯಕ್ಷರು, ಇಂಗ್ಲೀಷ ಅಧ್ಯಯನ ವಿಭಾಗ | ಸದಸ್ಯರು |
| 4. | ಡಾ.ಎನ್.ಎಚ್.ಕಲ್ಲೂರು (ಬಾಹ್ಯ ಸದಸ್ಯರು) ಸಹ-ಪ್ರಾಧ್ಯಾಪಕರು, ಇಂಗ್ಲೀಷ ಅಧ್ಯಯನ ವಿಭಾಗ, ಧಾರವಾಡ ವಿಶ್ವವಿದ್ಯಾಲಯ, ಧಾರವಾಡ. | ಸದಸ್ಯರು |
| 5. | ಮಾನ್ಯತೆ ಪಡೆದ ಮಾರ್ಗದರ್ಶಕರು ಪ್ರೊ ಪಿ.ಕಣ್ಣನ್, ಪ್ರಾಧ್ಯಾಪಕರು, ಇಂಗ್ಲೀಷ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ. | ಸದಸ್ಯರು |
| 6. | ಉಪ-ಕುಲಸಚಿವರು(ಶೈಕ್ಷಣಿಕ)/ ಕುಲಪತಿಗಳಿಂದ ನಾಮನಿರ್ದೇಶನಗೊಂಡ ನಿಕಾಯದ ಯಾವುದೇ ಸದಸ್ಯರು. | ಸದಸ್ಯ-ಸಂಚಾಲಕರು |

*ನಿರ್ಣಯ:-*

*ಅನುಮೋದಿಸಲಾಯಿತು.*

**ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 04*

ವಿಷಯ:- ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವಿದ್ಯುನ್ಮಾನ ಅಧ್ಯಯನ ವಿಭಾಗ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಹುದ್ದೆಗೆ ನಿಯೋಜನೆ ಮೇಲೆ ನಿಯುಕ್ತಿಗೊಳಿಸಿದ ಕುರಿತು.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 468 ಯುಎನ್ಇ 2016, ದಿ:3-2-2017.
2. ಸೇವೆಯಿಂದ ಬಿಡುಗಡೆ ಮಾಡಿದ ಕಛೇರಿ ಆದೇಶ ಸಂಖ್ಯೆ: ಕರಾಮವಿವಿ/ ಆಡಳಿತ-1/2016- 17/2750, ದಿ: 04-02-2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಸರಕಾರದ ಅಧಿಸೂಚನೆ ಮೇರೆಗೆ, ಹಾಗೂ ಸಿಂಡಿಕೇಟ ಸಭೆಯ ಘಟನೋತ್ತರ ಅನುಮತಿ ಮೇರೆಗೆ ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಧ್ಯಾಪಕರು ಹಾಗೂ

ಮುಖ್ಯಸ್ಥರು, ವಿದ್ಯುನ್ಮಾನ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಹುದ್ದೆಗೆ ದಿನಾಂಕ: 04–02–2017 ರಂದು ಪೂರ್ವಾಹ್ನ ನಿಯೋಜನೆ ಮೇಲೆ ಸೇವೆಯಿಂದ ಬಿಡುಗಡೆ ಗೊಳಿಸಲಾಗಿದೆ.

ಆದ್ದರಿಂದ ಸದರಿ ವಿಷಯನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–*

*ಘಟನೋತ್ತರ ಅನುಮೋದನೆ ನೀಡಲಾಯಿತು.*

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 05*

**ವಿಷಯ:–** ಮುದ್ರಣ ಘಟಕಕ್ಕೆ ಬೇಕಾಗುವ ಯಂತ್ರಗಳನ್ನು ಖರೀದಿಸುವ ಕುರಿತು.
**ಉಲ್ಲೇಖ:–** ದಿನಾಂಕ:30–01–2017ರಂದು ಜರುಗಿದ ಮುದ್ರಣ ಘಟಕದ ಸಭೆಯ ನಡವಳಿಗಳು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಬೇಕಾಗುವ ಕವರ ಆಮಂತ್ರಣ ಪತ್ರಿಕೆಗಳು, ಬಿಲ್ಲುಗಳು, ವಾರ್ಷಿಕ ವರದಿ, ಹಣಕಾಸು ವರದಿ, ಇನ್ನಿತರೆ ವರದಿಗಳ ಪ್ರತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ, ಕಡಿಮೆ ಸಮಯದಲ್ಲಿ ಮುದ್ರಿಸಲು ಸಹಾಯವಾಗುತ್ತದೆ. ಇದಕ್ಕಾಗಿ

| | | |
|---|---|---|
| 1. | Swift CBO Pro ಯಂತ್ರದಲ್ಲಿ 15X20 ಮುದ್ರಣ ಕಾರ್ಯ ಮತ್ತು ನೇಯದ ಬಟ್ಟೆಯ ಮೇಲೆ ಮುದ್ರಣ ಕಾರ್ಯ ಕೈಗೊಳಬಹುದಾಗಿದೆ. ಅದರ ಅಂದಾಜು ಬೆಲೆ | ರೂ. 6,25,000/– |
| 2. | ಮುದ್ರಣಕ್ಕೆ ಬೇಕಾಗುವ ಎಲ್ಲ ಪೇಪರ ಕತ್ತರಿಸಲು ಕಟ್ಟಿಂಗ ಯಂತ್ರದ (Semi Automatic Paper Cutting Machine Size 33”37”43”) | ರೂ. 2,80,000/– |
| 3. | Perfect Binding Machine (3-5mm thickness) ಅಂದಾಜು ಬೆಲೆ | ರೂ. 3,20,000/– |
| 4. | ಪಿನ್ನಿಂಗ್ ಯಂತ್ರದ ಅಂದಾಜು ಬೆಲೆ | ರೂ. 3,00,000/– |
| | | ರೂ.15,25,000/– |

ಮೇಲಿನ ನಾಲ್ಕು ಯಂತ್ರಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:**

**ಮೇಲಿನ ನಾಲ್ಕು ಯಂತ್ರಗಳನ್ನು ಖರೀದಿಸಲು ಅನುಮೋದಿಸಲಾಯಿತು.**

**ದಿನಾಂಕ:08–02–2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 06*

ವಿಷಯ:– ಬಾಕಿ ಮೊತ್ತ ಪಾವತಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಈ ಕೆಳಕಂಡ ವಿಭಾಗಗಳಲ್ಲಿ ಇದ್ದ ಝರಾಕ್ಸ ಮಸಿನ ರೀಪೆರಿ ಕಾರ್ಯವನ್ನು ಈ ಕೆಳಕಂಡ ಸಂಸ್ಥೆಯವರಿಂದ ಮಾಡಿಸಿರುತ್ತಾರೆ. ಆದರೆ ರೀಪೆರಿ ಕಾರ್‍ಯದ ಮೊತ್ತವು ಇಲ್ಲಿವರೆಗೆ ಪಾವತಿಯಾಗದೆ. ಆ ಮೊತ್ತವನ್ನು ಪಾವತಿಸುವ ಕುರಿತಂತೆ ಮೆ.ರೋಮನ ಟೆಕ್ನಾಲಜಿ, ಬಳ್ಳಾರಿಯವರು ದಿನಾಂಕ:19–01–2017ರಂದು ಕಛೇರಿಗೆ ಪತ್ರವನ್ನು ಸಲ್ಲಿಸಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

| Sl.no | Name of Firm | Name of the Department | Bill No/Date | Amount |
|---|---|---|---|---|
| 1. | Ruman Technology Bellary | PharmaChemistry | 853/31-11-2013 | 26,692/- |
| 2. | | Journalism | 852/29-11-2013 | 26,270/- |
| 3. | | M.Ped | 854/29-11-2013 | 25,848/- |
| Total | | | | 79,232/- |

ಕಾರಣ ಮೇಲ್ಕಂಡ ಮೊತ್ತವನ್ನು ಪಾವತಿಸುವ ಸಲುವಾಗಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

***M/s Ruman Technology Bellary* ಅವರ ಬಿಲ್ಲುಗಳನ್ನು ಪಾವತಿಸಲು *ಅನುಮೋದಿಸಲಾಯಿತು.***

**<u>ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 07*

ವಿಷಯ:- ಬಾಕಿ ಮೊತ್ತ ಪಾವತಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಈ ಕೆಳಕಂಡ ವಾಹನಗಳನ್ನು ಮೆ. ಬಿಜ್ಜರಗಿ ಮೊಟರ್ಸ(ಟಾಟಾ ಮೊಟರ್ಸ ಅಧಿಕೃತ ಮಾರಾಟಗಾರರು) ವಿಜಯಪುರದಲ್ಲಿ ದುರಸ್ಥಿಯನ್ನು ಮಾಡಿಸಲಾಗಿರುತ್ತದೆ. ದುರಸ್ಥಿಯನ್ನು ವೆಚ್ಚವನ್ನು ಇಲ್ಲಿಯವರೆಗೆ ಪಾವತಿಸಿರುವುದಿಲ್ಲ. ಬಾಕಿ ಮೊತ್ತವನ್ನು ಪಾವತಿಸುವ ಕುರಿತಂತೆ ಮೆ.ಬಿಜ್ಜರಗಿ ಮೊಟರ್ಸ ಇವರು ಮೊತ್ತಮ್ಮೆ ಬಿಲ್ಲನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

| Sl.no | Name of the Vehicle Registraion No | Name of Firm | Bill No/Date | Amount |
|---|---|---|---|---|
| 1. | KA-29, G-186 | M/S Bijjaragi Motors, Vijayapura | BIJRGI-BI-1213 07884/03-12-2012 | 9,689/- |
| 2. | KA-29, G-187 | | BIJRGI-BI-1213 01845/29-5-2012 | 6,674/- |
| 3. | KA-29, G-184 | | BIJRGI-BI-1213 BR-111/20-7-2011 | 350/- |
| 4. | KA-29, G-184 | | BIJRGI-BI-1213 BR-111/9-11-2011 | 350/- |
| 5. | KA-29, G-184 | | BIJRGI-BI-1213 BR-111/10-11-2011 | 150/- |
| Total | | | | 17,213/- |

ಕಾರಣ ಮೇಲ್ಕಂಡ ಮೊತ್ತವನ್ನು ಪಾವತಿಸುವ ಸಲುವಾಗಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

***M/S Bijjaragi Motors, Vijayapura* ಅವರ ಬಿಲ್ಲುಗಳನ್ನು ಪಾವತಿಸಲು *ಅನುಮೋದಿಸಲಾಯಿತು.***

ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 08*

ವಿಷಯ:- ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣ ಮತ್ತು ಇನ್ನಿತರೆ ವಿಭಾಗಗಳಿಗೆ ಪಿಠೋಪಕರಣಗಳನ್ನು Karnataka State Arts & Craft Emporium, ಬೆಂಗಳೂರು ಇವರಿಂದ ಖರೀದಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣಕ್ಕೆ ಹಾಗೂ ಇನ್ನಿತರ ವಿಭಾಗಗಳಿಗೆ ಒಳ್ಳೆಯ ಗುಣಮಟ್ಟದ ಸದ್ಯಕ್ಕೆ ಈ ಕೆಳಕಂಡ ಪಿಠೋಪಕರಣಗಳ ಅವಶ್ಯಕತೆವಿದ್ದು ಕಾರಣ ಅವುಗಳನ್ನು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ Karnataka State Arts & Craft Emporium, ಬೆಂಗಳೂರು ಇವರಿಂದ ಖರೀದಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| Sl. no | Description of Furniture | Required Quantity | Approximate Amount |
|---|---|---|---|
| 1. | Rose Wood Round Dining Table with Art Work along with 4 chairs | 01 set | 1,27,500/- |
| 2. | Rose Wood Round Dining Table with Art Work along with 10 chairs | 02 sets | 8,16,000/- |
| 3. | Rose Wood Partition | 02 No's | 1,42,800/- |
| 4. | Rose Wood Side Board Table | 01 No | 98,600/- |
| 5. | Rose Wood Table with 2 Master Chairs (Syndicate) | 21 set | 23,20,500/- |
| 6. | Rose Wood Table with 4 Royal Chairs | 01 set | 4,15,000/- |
| 7. | Rose Wood Round Dining Table with Art Work along with 8 chairs. | 02 sets | 7,25,000/- |
| | Total | | 46,45,400/- |

ಮೇಲ್ಕಂಡ ದರಗಳು ತೆರಿಗೆ (14.5%) ಮತ್ತು ಸಾಗಾಣಿಕ ವೆಚ್ಚಗಳನ್ನು ಹೊರತುಪಡಿಸಿರುತ್ತವೆ.

*ನಿರ್ಣಯ:-*

***ಅನುಮೋದಿಸಲಾಯಿತು.***

ದಿನಾಂಕ:08-02-2017ರಂದು ಜರುಗಿದ 96ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 09*

**ವಿಷಯ:-** ಡಾ.ಮಲ್ಲಿಕಾರ್ಜುನ.ಎನ್.ಎಲ್, ಸಹ-ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವ್ಯವಹಾರ ಅಧ್ಯಯನ ವಿಭಾಗ ಇವರಿಗೆ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು.

**ಉಲ್ಲೇಖ:-** ಡಾ.ಮಲ್ಲಿಕಾರ್ಜುನ.ಎನ್.ಎಲ್, ಸಹ-ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,

ವ್ಯವಹಾರ ಅಧ್ಯಯನ ವಿಭಾಗ ಇವರ ಪತ್ರ ಸಂಖ್ಯೆ:KSWUV/MBA/2016-17/491 ದಿ:12-1-2017.

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಾ.ಎನ್.ಎಲ್.ಮಲ್ಲಿಕಾರ್ಜುನ ಸಹ-ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವ್ಯವಹಾರ ಅಧ್ಯಯನ ವಿಭಾಗ ಇವರು ದಿನಾಂಕ:20 & 21 ಮಾರ್ಚ 2017 ರಂದು Pan Pacific Hotel Singapore ನಲ್ಲಿ ಜರುಗಲಿರುವ Second International conference on Business Management, Social Sciences and Humanities:Reality and Expectation ಎಂಬ ವಿಷಯ ಕುರಿತು ಜರುಗಲಿರುವ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ "Innovation Management -A Tool for Sustainable Competitive Advantage in Higher Education" ಎಂಬ ಪ್ರಬಂಧವನ್ನು ಮಂಡಿಸಲು ಅನುಮತಿ ಕೋರಿದ್ದಾರೆ. ದಿನಾಂಕ 19-23 ಮಾರ್ಚ 2017 ವರೆಗೆ ಒಒಡಿ Conference Fee, Train Fare, Airfare, Transportation(Local), Hotel, Meals(for 4 days) Including Breakfast, lunch and dinner)ಗೆ ತಗಲುವ ಅಂದಾಜು ವೆಚ್ಚ ರೂ.1,56,415/-ಗಳನ್ನು ಮುಂಗಡವಾಗಿ ಮಂಜೂರಿಸಲು ವಿನಂತಿಸಿದ್ದಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

**ಅನುಮೋದಿಸಲಾಯಿತು.**

ಮಾನ್ಯ ಕುಲಪತಿ ಅವರು ಸಭೆಯ ಕೊನೆಗೆ ಘನತೆವೆತ್ತ ರಾಜ್ಯಪಾಲರಿಂದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾದ ಡಾ.ಸರಸ್ವತಿ.ಎಸ್. ಅವರ ಅವಧಿಯು ದಿನಾಂಕ:9-02-2017 ಮುಕ್ತಾಯಗೊಳ್ಳುವದರಿಂದ ಈ ಅವಧಿಯಲ್ಲಿ ವಿಶ್ವವಿದ್ಯಾಲಯದ ಏಳ್ಗೆಗಾಗಿ ಅವರ ಅತ್ಯಮೂಲ್ಯ ಸಹಕಾರ ನೀಡದ್ದಕ್ಕಾಗಿ ಧನ್ಯವಾದಗಳನ್ನು ಹೇಳಿದರು ನಂತರ ಮಾನ್ಯ ಕುಲಪತಿಗಳು ಹಾಗೂ ಎಲ್ಲ ಸಿಂಡಿಕೇಟ್ ಸದಸ್ಯರು ಅವರಿಗೆ ಸನ್ಮಾನಿಸಿ ಬೀಳ್ಕೊಟ್ಟರು. ಅವರ ಕುರಿತು ಎಲ್ಲ ಸದಸ್ಯರು ತಮ್ಮ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಇದಕ್ಕೆ ಉತ್ತರವಾಗಿ ಡಾ.ಸರಸ್ವತಿ.ಎಸ್. ಅವರು ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ ಹಾಗೂ ಎಲ್ಲ ಸಿಂಡಿಕೇಟ್ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಿದರು. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯವು ಇನ್ನು ಉತ್ತಮ ಮಟ್ಟಕ್ಕೆ ಬೆಳೆಯಲಿ ಎಂದು ಹಾರೈಸಿದರು.

**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ